SRI M. VEERAPPA MOILY.—Sir, I introduce the Karnataka Tax on Professions, Trades, Callings and Employments (Amendment) Bill, 1981.

MR. SPEAKER.—The Bill is introduced.*

Now, the general discussion on the Budget for the year 1981-82. I call the hon Member Dr. H. L. Thimme Gowda to continue.

## REPRESENTATION

*reg : Taking up Notice Under Rule 312 Visit of Minister of Planning & Wakfs to U. A. E.*

ಶ್ರೀ ಎಸ್. ಆರ್. ಬೊಮ್ಮಾಯಿ.—ಅದರ ಬಗ್ಗೆ ನೋಟಿಸ್ ಕೊಟ್ಟು ಒಂದು ವಾರವಾಯಿತು. ಒಂದು ವಿಚಾರ ಹೇಳುವುದಾದರೆ, ಈ ವಿಷಯದ ಬಗ್ಗೆ ಮೇಲ್ಮನೆಯಲ್ಲಿ ಎರಡು-ಮೂರು ದಿವಸಗಳ ಕಾಲ ಚರ್ಚೆ ನಡೆಯಿತು. ಆದರೆ, ಅಲ್ಲಿ ಚರ್ಚೆ ನಡೆದದ್ದರ ಬಗ್ಗೆ ಹೇಳುವುದಿಲ್ಲ.....

ಅಧ್ಯಕ್ಷರು.—ಮೇಲ್ಮನೆಗೂ ನಮಗೂ ಸ್ವಲ್ಪ ವ್ಯತ್ಯಾಸವಿದೆ. ನಾವು ಬಡ್ಜೆಟನ್ನು ಪಾಸು ಮಾಡ ಬೇಕಾಗಿದೆ. ಆಲ್ಲದೆ, ಈ ವಿಷಯದ ಬಗ್ಗೆ ಕಾರ್ಯಕಲಾಪ ಸಲಹಾ ಸಮಿತಿಯಲ್ಲೂ ಒಪ್ಪಿಕೊಂಡಿದ್ದೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಆರು ಗಂಟೆ ವೇಳ ಈ ವಿಷಯವನ್ನು ಚರ್ಚೆಗೆ ತೆಗೆದು ಕೊಂಡರೆ, ಇದಕ್ಕೆ ಅಷ್ಟು ಮಹತ್ವ ಕೊಟ್ಟಿಲ್ಲವೆಂದು.....

ಅಧ್ಯಕ್ಷರು.—ಹಾಗೆಂದು ಭಾವಿಸಬಾರದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಕಾಲಮಿತಿ ಹಾಕಿ ಈಗಲೇ ಮತಕ್ಕೆ ಆ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬಾರದು ?

ಅಧ್ಯಕ್ಷರು.—ದಯವಿಟ್ಟು ಒಂದು ನಿಮಿಷ ಕೇಳಿ. ಆಯವ್ಯಯದ ಮೇಲೆ ಮಾತನಾಡುವವರು ಬಹಳ ಜನ ಸದಸ್ಯರಿದ್ದಾರೆ. ಈಗಾಗಲೇ ಶ್ರೀ ಆರ್.ಗಂ ಮತ್ತು ಶ್ರೀ ಸಯನಕ್ ಅವರನ್ನು ಬಿಟ್ಟು ಉಳಿದೆಲ್ಲ ಪಕ್ಷದ ಮುಖಂಡರೂ ಮಾತನಾಡಿದ್ದಾರೆ. ನಮಗಿರತಕ್ಕ ಕಾಲದಲ್ಲಿ ಸುಮಾರು ನಾಲ್ಕುನೂರು ನಿಮಿಷಗಳಿಗೂ ಹೆಚ್ಚು ಕಾಲವನ್ನು ಇದಕ್ಕಾಗಿ ತೆಗೆದುಕೊಂಡಿದ್ದೇವೆ. ಆ ದೃಷ್ಟಿಯನ್ನು ಗಮನದಲ್ಲಿಟ್ಟು ಕೊಂಡು ಈ ವಿಷಯವನ್ನು ಆರು ಗಂಟೆಗೆ ತೆಗೆದುಕೊಳ್ಳಲು ಉದ್ದೇಶಿಸಿದ್ದೇನೆ. ಆದುದರಿಂದ, ತಾವು ಇದರ ಗಂಭೀರತೆಯನ್ನು ಗಮನದಲ್ಲಿಟ್ಟುಕೊಂಡು, ಕಾಲದ ಮಿತಿಯನ್ನು.....

ಶ್ರೀ ಹೆಚ್. ಡಿ. ದೇವೇಗೌಡ.—ತಮ್ಮಲ್ಲಿ ನಾನೊಂದು ವಿಷಯವನ್ನು ವಿನಂತಿ ಮಾಡಿಕೊಳ್ಳು ತ್ತೇನೆ. ಬಹುಶಃ ನಮಗೆಲ್ಲರಿಗಿಂತಲ್ಲೂ ಹೆಚ್ಚಾಗಿ ಈ ಸದನದ ಪ್ರಾಮುಖ್ಯತೆಯನ್ನು ಉಳಿಸಿಕೊಳ್ಳುವುದ ರಲ್ಲಿ ಮುಂದೆ ಹೋಗುತ್ತೀರೆಂದು ಆಶಿಸುತ್ತೇನೆ. ಆದರ ಬಗ್ಗೆ ನಾವು ಯಾವ ಸಂಶಯವನ್ನೂ ವ್ಯಕ್ತ ಪಡಿಸುವುದಿಲ್ಲ. ಈಗ ಕಾಲದ ಪರಿಮಿತಿ ಇದೆ ಎಂದು ತಾವುಹೇಳುತ್ತಿದ್ದೀರಿ. ಈ ವಿಷಯ ಈ ಸದನ ದಲ್ಲಿ ಚರ್ಚೆಯಾಗುವುದಕ್ಕೆ ಮುನ್ನ ಮೇಲ್ಮನೆಯಲ್ಲಿ ಪ್ರಸ್ತಾಪವಾಗಿದೆ. ಆ ಬಗ್ಗೆ ನನ್ನದೇನೂ ಆಕ್ಷೇಪಣೆ ಇಲ್ಲ. ಆದರೆ, ಈ ಸದನದ ಪ್ರಾಮುಖ್ಯತೆ ಸ್ವಲ್ಪ ಕ್ಷೀಣಿಸುತ್ತಿದೆ ಎಂದು ನನ್ನ ಭಾವನೆ. ಮಾನ್ಯ ಲಕ್ಷ್ಮೀಸಾಗರ್ ಅವರು ಈ ವಿಷಯದ ಬಗ್ಗೆ ನೋಟಿಸ್ ಕೊಟ್ಟು ಒಂದು ವಾರದ ಮೇಲಾಗಿದೆ.

ಅಧ್ಯಕ್ಷರು.—ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ಈ ವಿಷಯವಾಗಿ ಮಾನ್ಯ ಗಂಗಾಧರನ್ ಅವರು ನಿಲುವಳಿ ಸೂಚನೆಯನ್ನು ಕಳುಹಿಸಿದ್ದರು. ಅದು ನಿಲುವಳಿ ಸೂಚನೆಯಲ್ಲಿ ಬರುವುದಿಲ್ಲ ಬೇರೆ ರೂಪದಲ್ಲಿ ಪ್ರಸ್ತಾಪ ಮಾಡಿ ಎಂದು ನಾನು ಅವರಿಗೆ ಹೇಳಿದೆ. ತದನಂತರ.....

ಶ್ರೀ ಹೆಚ್. ಡಿ. ದೇವೇಗೌಡ.—ರಾಜ್ಯಾಂಗದ ಪ್ರಕಾರ ನಮಗೆ ಕೆಲವು ಸವಲತ್ತುಗಳಿವೆ. ನಾವು ರಾಜ್ಯಾಂಗದ ಪರಿಮಿತಿಯೊಳಗೆ ಕೆಲಸ ಮಾಡುವಾಗ ನಮಗಿರತಕ್ಕ ಕೆಲಸದ ಹೊರೆ ಕೂಡ ಜಾಸ್ತಿಯಾಗು

* Bill appended as Annexure-IV.

ತ್ತದೆ. ಈ ವಿಷಯವನ್ನು ಚರ್ಚೆ ಮಾಡಲು ಇಂದು ಆರು ಗಂಟೆಗೆ ಗೊತ್ತುಮಾಡಿದ್ದಂತೆ ಹಿಂದೆಯೇ ಮಾಡಬಹುದಿತ್ತು. ಒಂದೊಂದು ಸಾರಿ ಈ ಸದನದ ಸಮೀಕ್ಷೆಯನ್ನು ನೋಡಿದಾಗ, ಈ ಸದನ ಸಪ್ಪೆಯಾಗಿತ್ತು ; ಕೆಲಸ ಮಾಡಲಿಲ್ಲ ಎಂದು ಬರೆಯುವುದನ್ನು ನೋಡುತ್ತಿದ್ದೇವೆ. ಆದರ ಜೊತೆಗೆ, ಈ ಸದನದ ಕಲಾಪವನ್ನು ಮೇಲ್ಮನೆಯ ಕಲಾಪದೊಂದಿಗೆ ಹೋಲಿಸಿಕೊಂಡಾಗ ಇಲ್ಲಿ ಬಹಳ ಸಪ್ಪೆ.....

ಅಧ್ಯಕ್ಷರು.—ಸಪ್ಪೆಯಾದರೆ ಸ್ವಲ್ಪ ಖಾರ ಮಾಡಿದರಾಯಿತು !

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ದಿವಸ ಐದು ಗಂಟೆಗೆ ಈ ವಿಷಯವನ್ನು ತೆಗೆದುಕೊಂಡು ಚರ್ಚೆ ಮಾಡುವುದು ಒಳ್ಳೆಯದೆಂದು ಸಲಹೆ ಮಾಡುತ್ತೇನೆ. ಏಕೆಂದರೆ, ನಾಳೆ ಸಾಮಾನ್ಯ ಚರ್ಚೆ ಮೇಲೆ ಸದಸ್ಯರು ಭಾಗವಹಿಸಬೇಕಾಗುತ್ತದೆ. ಆದಕ್ಕೂ ಅವಕಾಶ ಕೊಡಬೇಕಾಗಿದೆ.

MR. SPEAKER.—Let us think. ಕಾರ್ಯಕಲಾಪ ಸಲಹಾ ಸಮಿತಿ ನಾಳೆ ಸೇರುವುದು ಅಂತ ಇದೆ. ಜೊತೆಗೆ ವಿರೋಧಪಕ್ಷದವರೇ ಹೆಚ್ಚು ಮಾತನಾಡತಕ್ಕ ಸದಸ್ಯರಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅದು ಸ್ವಾಭಾವಿಕ.

ಶ್ರೀ ಹೆಚ್. ಡಿ. ದೇವೇಗೌಡ.—ಸಾಮಾನ್ಯವಾಗಿ ಚರ್ಚೆ ನಡೆಯುವಾಗ ಸಾಧ್ಯವಾದ ಮಟ್ಟಿಗೆ ಎಲ್ಲರಿಗೂ ಅವಕಾಶ ಕೊಡಬೇಕು. ಇರತಕ್ಕ ೨೨೪ ಜನಕ್ಕೂ ಅವಕಾಶ ಕೊಡಬೇಕಾದರೆ ಸಾಮಾನ್ಯ ಚರ್ಚೆಯನ್ನು ಒಂದು ತಿಂಗಳು ಮಾಡಬೇಕಾಗುತ್ತದೆ. ಈಗ ಮಾನ್ಯ ವಿರೋಧ ಪಕ್ಷದ ನಾಯಕರು ೨೦೦ ನಿಮಿಷ ಮಾತನಾಡಿದ್ದಾರೆ ; ಆದರ ಬಗ್ಗೆ ನನ್ನ ಆಕ್ಷೇಪ ಇಲ್ಲ ; ಇನ್ನು ಹೆಚ್ಚು ಮಾತನಾಡಲಿ. ನಮ್ಮ ಸದಸ್ಯರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಪತ್ರಿಕೆಯವರು ೬ ಗಂಟೆಗಳ ಮೇಲೆ ಕೂತುಕೊಳ್ಳುವುದಾದರೆ, ಹೆಚ್ಚು ಹೊತ್ತು ಕೂತುಕೊಳ್ಳಬಹುದು. ಬೆಳಿಗ್ಗೆ ಹೊತ್ತು ಸ್ವಲ್ಪಕಾಲ ಕೂತುಕೊಂಡು ಕಾರ್ಯಕ್ರಮ ನಡೆಸಬಹುದು. ವಿಷಯವನ್ನು ಮುಂಜೆ ತೆಗೆದುಕೊಂಡು ಚರ್ಚೆ ಮಾಡುವುದು ಸೂಕ್ತ.

ಅಧ್ಯಕ್ಷರು.—ಸಭೆಯ ಅಭಿಪ್ರಾಯ ಮುಂಜೆ ತೆಗೆದುಕೊಳ್ಳಬಹುದು ಅಂದರೆ ತೆಗೆದುಕೊಳ್ಳೋಣ.

ಶ್ರೀ ಜೆ. ಹೆಚ್. ಪಟೇಲ್.—೬ ಗಂಟೆಗೆ ಬೇಕಾದರೆ ತೆಗೆದುಕೊಳ್ಳಿ.

SRI A. LAKSHMISAGAR.—Sir, 6 'O' clock would be very inconvenient for the press.....We shall have a morning sitting tomorrow.

MR. SPEAKER.—We cannot have the cake and eat it also.

ವಿನಾಗುತ್ತೆ ಅಂದರೆ, ಕಾಲಮಿತಿ ಇಟ್ಟುಕೊಂಡರೆ ಇನ್ನೂ ಎಫೆಕ್ಟಿವ್ ಆಗಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಇಷ್ಟನ್ನು ಮಾತ್ರ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಾಳೆ ಬೆಳಿಗ್ಗೆ ಸಭೆ ಸೇರುವ ವಿಚಾರದಲ್ಲಿ ಯೋಚನೆ ಮಾಡೋಣ.

ಶ್ರೀ ಹೆಚ್. ಗಂಗಾಧರನ್.—ಬೆಳಿಗ್ಗೆ ಸಭೆ ಸೇರಿದರೆ, ೩೧೨ರ ವಿಷಯವನ್ನು ನಾಳೆ ತೆಗೆದುಕೊಳ್ಳಬಹುದಲ್ಲ.

ಶ್ರೀ ಪಿ. ರಾಂದೇವ್.—ಸೀನಿಯರ್ ಆಫೀಸರ್ಸ್, ಕಾರ್ಯದರ್ಶಿಗಳು ಇಲ್ಲಿ ಚರ್ಚೆ ನಡೆಯುವಾಗ ಗೈರುಹಾಜರಿ ಆಗುವುದರ ಬಗ್ಗೆ ತಾವು ತೀವ್ರಗಮನ ಹರಿಸಬೇಕೆಂದು ಹೇಳುತ್ತೇನೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ಸಂಬಂಧಪಟ್ಟ ಅಧಿಕಾರಿಗಳು ಇದ್ದಾರೆ. ವಿಧಾನ ಪರಿಷತ್ತಿನಲ್ಲಿ ಪ್ರಶ್ನೆಗಳು ಇರುವುದರಿಂದ ಅಲ್ಲಿಗೆ ಹೋಗಿದ್ದಾರೆ.

ಶ್ರೀ ಪಿ. ರಾಂದೇವ್.—ಸ್ವಾಮಿ, ಫೋರಕಲ್ ಮೇಲೆ ನೀರು ಸುರಿದಂತೆ ಸರ್ವಜ್ಞ; ತಾವಾದರೂ ವಾರ್ನಿಂಗ್ ಕೊಡಬೇಕು.

SRI C. M. ARUMUGHAM.—Sir, I could understand the anxiety of Sri Bhaskar Shetty. He can defend the Minister's absence But he wants to defend the absence of officers also.

SRI B. BHASKER SHETTY.—The other day, I wrote a letter to the Chief Secretary also.....

ಶ್ರೀ ಎಂ. ಚಂದ್ರಶೇಖರ್.—ತಾವು ಹೇಳುವ ಬದಲು ಮಂತ್ರಿಗಳು ಹೇಳಲ್ಲಿ.

MR. SPEAKER.—I have also expressed my concern, the House has also expressed its concern. In fact, the other day, the Minister.....

ಶ್ರೀ ಜೆ. ಹೆಚ್. ಪಟೇಲ್.—ಈ ಸದನಕ್ಕೆ ಅಧಿಕಾರಿಗಳು ಸಂಬಂಧ ಇಲ್ಲ ಸರ್ಕಾರ ನಡೆಸ ತಕ್ಕವರು ಬರೆದುಕೊಟ್ಟರೆ ಒಳ್ಳೆಯದು. ಅವರಿಗೆ ನಾವು ಹೇಳುವ ವಿಷಯ ಅರ್ಥವಾಗುತ್ತೆ ; ಭಾಸ್ಕರ ಶೆಟ್ಟರಿಗೆ ಏನು ಅರ್ಥವಾಗುತ್ತೆ ? ನಮಗೆ ಗೊತ್ತಿದೆ ಅಂದರೆ ನಮ್ಮ ಅಭ್ಯಂತರ ಇಲ್ಲ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಸಂಬಂಧಪಟ್ಟ ಮಂತ್ರಿಗಳೂ ಇದ್ದಾರೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಇದರ ಬಗ್ಗೆ ಸಾಕಷ್ಟು ಆದೇಶ ಕಳುಹಿಸಿದ್ದೇವೆ. ತಾವು ಕಂಡ ಹಾಗೆ ನಿನ್ನೆ ಮೊನ್ನೆ ಹಾಜರಿ ಚನ್ನಾಗಿತ್ತು. ಆ ಸದನದಲ್ಲಿ ಇರುತ್ತಾರೆ ; ಈ ಸದನದಲ್ಲಿಯೂ ಇರು ತ್ತಾರೆ. ಅಧಿಕಾರಿಗಳು ಇಲ್ಲದೇ ಇದ್ದರೆ ಕೊರತೆ ಬರುವುದಿಲ್ಲ. ಬರೆದು ಕೊಡುವುದನ್ನು ನಮಗೆ ಬಿಟ್ಟಿದೆ ; ನಿಮಗೆ ಉತ್ತರ ಕೊಡತಕ್ಕಂಥ ಸಂಪೂರ್ಣ ಜವಾಬ್ದಾರಿ, ಪೊಣೆಗಾರಿಕೆಯನ್ನು ನಾವು ವಹಿಸಿಕೊಂಡಿದ್ದೇವೆ.

MR. SPEAKER.—The presence of other colleagues would help you also.

SRI M. VEERAPPA MOILY.—That is what I am telling. The officers should be present to make the debate effective and it will imbibe the spirit of detection. I d agree with the spirit of the presence of the officers. That has been noted.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಅಧ್ಯಕ್ಷರೇ, ನಾನು ಮಾತನಾಡುವುದಕ್ಕೆ ಮುಂಚೆ ಎರಡು ಗಂಭೀರ ವಿಷಯವನ್ನು ಪ್ರಸ್ತಾಪ ಮಾಡಿ ಆದರ ವಿಚಾರದಲ್ಲಿ ತಮ್ಮ ರೂಲಿಂಗ್‌ನ್ನು ಪ್ರಾರ್ಥಿಸುತ್ತೇನೆ.

ಅಧ್ಯಕ್ಷರು.—ನಿನ್ನೆ ನಡೆದಂತ ಘಟನೆ ತಾನೆ ?

ಶ್ರೀ ಹೆಚ್. ಎಲ್. ತಿಮ್ಮೇಗೌಡರು.—ಹೌದು.

ಅಧ್ಯಕ್ಷರು.—ನಿನ್ನೆ ನಾನು ವಿಚಾರ ಮಾಡಿದ್ದೇನೆ ; ನಾನು ಅದರ ಬಗ್ಗೆ ವಿಚಾರಿಸುತ್ತೇನೆ. ಇವತ್ತು ವಿರೋಧ ಪಕ್ಷದ ನಾಯಕರು ಇಲ್ಲ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಮೊದಲನೆಯದಾಗಿ ನಾನು ಹೇಳುವುದು. ಲಂಕೇಶ್ ಪತ್ರಿಕೆಯವರು ಏನು ಹೇಳಿದ್ದರು.

ಶ್ರೀ ಜೆ. ಹೆಚ್. ಪಟೇಲ್.—ಸ್ವಾಮಿ, ವಿರೋಧಪಕ್ಷದ ನಾಯಕರು ಇರುವಾಗ ಮಾತನಾಡು ವುದು ಒಳ್ಳೆಯದು. ಅವರು ಇಲ್ಲದೇ ಇರುವಾಗ ಇವರು ಮಾತನಾಡಿ ; ಮತ್ತೆ ಅದು ರೆಕಾರ್ಡ್‌ನಲ್ಲಿ ಹೋಗಬಾರದು.

ಅಧ್ಯಕ್ಷರು.—ಅವರು ಬಂದಾಗ ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಕೊಡುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅರ್ಥ ಹೀಗಾಗುತ್ತೆ ; ಅವರು ಬರದೇ ಹೋದರೆ ಪ್ರಸ್ತಾಪ ಮಾಡಲಿಕ್ಕಾಗುವುದಿಲ್ಲ.

ಅಧ್ಯಕ್ಷರು.—ಬರದೇ ಹೋದರೆ ಬೇರೆ ವಿಚಾರ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅವರು ಇರಬೇಕೆಂಬುದನ್ನು ನಾನು ಒಪ್ಪುತ್ತೇನೆ.

MR. SPEAKAR.—There was one aspect of it. Of Course, when the Hon'ble Member Dr. Thimmegowda requested him to withdraw the word, he said so long as the word is not unparliamentary, I am not going to withdraw this word. Therefore, it is better and fair that

if the Hon'ble Leader of the Opposition is present in the House, we can discuss about it. ನಿನ್ನೆ ದಿವಸಾನೇ ನಾನು ಇದರ ಬಗ್ಗೆ ಗಮನಹರಿಸಿದ್ದೇನೆ. ಈ ಮನೆಯಲ್ಲಿ ಆನಾವಶ್ಯಕವಾಗಿ ಬಳಸುವಾರದೇ ಇರತಕ್ಕ ಶಬ್ದಗಳನ್ನು ಬಳಸಲಿಕ್ಕೆ ಅವಕಾಶ ಕೊಡಬಾರದು ಎನ್ನುವುದೇ ನನ್ನ ನಿಲುವು : ಈ ಸಭೆಯ ನಿಲುವು. ಈ ವಿಚಾರದಲ್ಲಿ ಕಾರ್ಯಾಲಯದ ಜೊತೆಗೆ ಮಾತನಾಡಿದ್ದೇನೆ. ವಿರೋಧ ಪಕ್ಷದ ನಾಯಕರು ಬಂದಾಗ ತಮಗೆ ನಾನು ಅವಕಾಶಕೊಡುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ನಿನ್ನೆ ಈ ಘಟನೆ ನಡೆದಾಗ ನಾನು ಸಭೆಯಲ್ಲಿರಲಿಲ್ಲ. ನಾನು ೬.೦೫ ನಿಮಿಷಕ್ಕೆ ಈ ಸಭೆಯನ್ನು ಬಿಟ್ಟಿದ್ದೆ. ಯಾವ ಪದ ಪ್ರಯೋಗ ಮಾಡಿದರು ಅದರಿಂದ ಈ ಸಭೆಯ ಘನತೆಗೆ, ಸಭೆಯ ಗಂಭೀರತೆಗೆ. ಸದಸ್ಯರ ಹಕ್ಕಿನ ಚ್ಯುತಿಯಾಗಿದೆ ಎನ್ನುವ ಬಗ್ಗೆ, ವಾದ ವಿವಾದಗಳು ಪ್ರಾರಂಭವಾಗಿವೆ. ಇದರ ಬಗ್ಗೆ ನಾನು ಸರಿ ತಪ್ಪು ಎಂದು ಹೇಳುವುದಕ್ಕೆ ಹೋಗುವುದಿಲ್ಲ. ಪ್ರಯೋಗ ಮಾಡಿರತಕ್ಕವರು ಈ ಸದನದ ಅತ್ಯಂತ ಹಿರಿಯ ಸದಸ್ಯರು. ಜನತಂತ್ರ ವ್ಯವಸ್ಥೆ ಈ ದೇಶದಲ್ಲಿ ಆಸ್ತಿತ್ವಕ್ಕೆ ಬಂದಾಗಿನಿಂದ ಈ ಮನೆಯ ಸದಸ್ಯರಾಗಿದ್ದಾರೆ. ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದರು ಆಳವಾದ ಅನುಭವ ಇರತಕ್ಕವರು. ಇವತ್ತು ನಾವು ಅವರು ಬಳಸಿರತಕ್ಕ ಪದದ ಬಗ್ಗೆ ನಿರ್ಣಯ ತೆಗೆದುಕೊಳ್ಳುವುದರಲ್ಲಿ ವಿಳಂಬವಾದರೆ ಪರಿಣಾಮ ಏನಾಗುತ್ತದೆಂಬುದನ್ನು ನಾವು ಯೋಚನೆ ಮಾಡಬೇಕು. It has already appeared in the press.

ಅಧ್ಯಕ್ಷರು.—ತಮ್ಮ ಅಭಿಪ್ರಾಯವನ್ನು ನಾನು ಒಪ್ಪುತ್ತೇನೆ. ನಿನ್ನೆ ಹೆಚ್ಚು ಕಾಲ ಕೊಡು ಕೊಂಡು ಪ್ರಸ್ತಾಪ ಮಾಡಿದ್ದರೆ ಸಂಕ್ಷಪ್ತವಾಗಿತ್ತೇನೋ ಎಂದು ನನ್ನ ಮನಸ್ಸಿಗೆ ಅನ್ನಿಸಿತು. ಇದರ ತತ್‌ಕ್ಷಣವೇ, ಕಾರ್ಯಾಲಯದ ಕಾರ್ಯದರ್ಶಿಯವರೊಂದಿಗೆ ಮಾತನಾಡಿ ಗಮನಿಸಿದ್ದೇನೆ. ಸದಸ್ಯರು ಇಲ್ಲದೇ ಇರತಕ್ಕ ಸಮಯದಲ್ಲಿ ಪ್ರಸ್ತಾಪ ಮಾಡುವುದು ಬೇಡ. ಇವತ್ತು ಅವರು ಬಂದರೆ, ಇವತ್ತೇ ಪ್ರಸ್ತಾಪ ಮಾಡುವುದಕ್ಕೆ ಅವಕಾಶಕೊಡುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ತಮ್ಮ ಅನುಮತಿಯನ್ನು ಪಡೆದು ನಮ್ಮ ನಾಯಕರಿಗೆ ಬರುವಂತೆ ತಿಳಿಸುತ್ತೇನೆ.

ಶ್ರೀ ಎಚ್. ಎಲ್. ತಿಮ್ಮೇಗೌಡ.—ಮಾನ್ಯ ಅಧ್ಯಕ್ಷರೇ ತಾವು ಹೇಳಿದ್ದೀರಿ, ಇವತ್ತು ವಿರೋಧ ಪಕ್ಷದ ನಾಯಕರನ್ನು ಕರೆಸಿ ತಮ್ಮ ರೂಲಿಂಗ್ ಕೊಡಬೇಕು. ವಿಷಯಗಳೆಲ್ಲ ಪತ್ರಿಕೆಗಳಲ್ಲಿ ಬಂದಿದೆ.

ಅಧ್ಯಕ್ಷರು.—ವಿರೋಧಪಕ್ಷದ ಉಪನಾಯಕರು ಹೇಳಿದ್ದಾರೆ, ವಿರೋಧಪಕ್ಷದ ನಾಯಕರನ್ನು ಕರೆಸುತ್ತೇವೆಂದು ಅವರು ಬಂದ ಮೇಲೆ ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅದಷ್ಟು ಜಾಗ್ರತೆ ಕರೆಸಿ, ತಮ್ಮ ನಿರ್ಣಯ ಏನೆಂದು ಬರಲಿ.

ಅಧ್ಯಕ್ಷರು.—ತಮಗೆ ಗೊತ್ತಿರುವ ಹಾಗೆ ರೂಲ್ಸ್ ಕಮಿಟಿ ಮಾಡಿದ್ದಾರೆ. ಸದಸ್ಯರು ಬಹಳ ಜನ ಕದಿಮೆಯಾಗಿದ್ದಾರೆ. ಬಸವಲಿಂಗಪ್ಪನವರು ಈ ಕಡೆ ಬಂದಿದ್ದಾರೆ. ವಿರೋಧ ಪಕ್ಷದ ವತಿಯಿಂದ ಒಬ್ಬರನ್ನು ಸೇರಿಸಿಕೊಳ್ಳುವುದಕ್ಕೆ ಸರ್ಕಾರ ಅನುಮತಿಯನ್ನು ಕೇಳುತ್ತಾ ಇದೆ. The hon. Minister may move the motion :

**Motion to increase the Number of Members of the Rules Committee.**

SRI Y. RAMAKRISHNA.—(Minister for Parliamentary Affairs) : Mr. Speaker Sir, I move :

> "That the strength of the Rules Committee constituted by the House be raised to 16 Members in addition to Speaker and Deputy Speaker and that the Speaker may nominate an additional Member to the Committee."

MR. SPEAKER.—I Put the motion to Vote of the House.